ಶ್ರೀ ಕಡಿದಾಳ್ ದಿವಾಕರ್.—ಅವರ ಜಮೀನಿನಲ್ಲಿ ಡ್ಯಾಮೇಜ್ ಆಗಿರುವುದನ್ನು ನಾನು ನೋಡಿದ್ದೇನೆ. ಆದುದರಿಂದ ಅವರಿಗೆ ಏನಾದರೂ ಪರಿಹಾರ ಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆರೀತಿ ಏನಾದರು ರೈತರ ಜಮೀನಿನಲ್ಲಿ ಡ್ಯಾಮೇಜ್ ಆಗಿದ್ದರೆ ಅದರ ಪಕ್ಕದಲ್ಲಿ ಏನಾದರೂ ಒಂದು ಲೈನ್.ಹಾಕಬೇಕಾಗಿದ್ದರೆ ಅಲ್ಲಿ ಇಲ್ಲಿ ಸ್ವಲ್ಪ ಜಾಗವನ್ನು ತೋಡಿ ಕೊಳ್ಳುತ್ತಾರೆ. ಒಟ್ಟಿನಲ್ಲಿ ಯಾವುದಾದರೂ ರೈತರ ಜಮೀನಿನಲ್ಲಿ ಡ್ಯಾಮೇಜ್ ಅಷ್ಟು ದೊಡ್ಡ ಪ್ರಮಾಣದಲ್ಲಿ ಆಗಿದೆ ಎಂದು ಕಂಡು ಬಂದರೆ, ಅದು ಪರಿಹಾರ ಕೊಡುವುದಕ್ಕೆ ಯೋಗ್ಯವಾಗಿದೆ ಎಂದು ಕಂಡುಬಂದರೆ ಆ ಬಗ್ಗೆ ಪರಿಹಾರ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

Subsidy for Films by the Government

657. SRI M. SRINIVAS (Srirangapatna).—Will the Minister of State for Information and Youth Services be pleased to state:—

(*a*) for how many films the Government has given subsidy durtng 1975–76, 1976–77;

(*b*) whether there are any film which have not been released even though they have received the subsidy amount;

(*c*) if so, the number of such films and who are their producers ;

(*d*) whether the Government intend to give subsidy to the films on the criterial of quality ?

SRI K. H. SRINIVAS (Minister of State for Information and Youth Service).—

(*a*) Subsidy sanctioned to: 19 films during 1975–76, and 43 Films during 1976–77.

(*b*) Yes.

(*c*) —

1.	Hoysala	...	Bhavanichitra, Bangalore.
2.	Prayaschitha (Kan–Col)	...	R. Key Enterprises. Bangalore.
3.	Yaaru Sukhi (Kan–BW)	...	Pushpalaya Films, Bangalore.
4.	Mitra Drohi (Kan–BW)	...	Seven Hills Films, Bangalore
5.	Sringeri Mahathme (Kan-BW)	...	Mahathma Productions, Bangalore.
6.	Bhavataranga (Kan–BW)	...	Valmiki Movies, Bangalore.

(*d*) This issue is under consideration.

ಶ್ರೀ ಎಂ. ಶ್ರೀನಿವಾಸ್.—ಸ್ವಾಮಿ, ಈ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಈ ಚಿತ್ರಗಳು ಸೆನ್ಸಾರ್ ಆದ ಮೇಲೆ ಪ್ರದರ್ಶನಕ್ಕೆ ಬರಬೇಕಾಗುತ್ತದೆ. ಆದರೆ ಕೆಲವು ಚಿತ್ರಗಳು ಈ ಬಗ್ಗೆ ಸಬ್ಸಿಡಿಯನ್ನೂ ತೆಗದುಕೊಂಡು ಪ್ರದರ್ಶನಕ್ಕೆ ಬರದೇ ಇದ್ದರೆ ಅದರ ಮೇಲೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಈ ಬಗ್ಗೆ ಏನಾದರೂ ಕಾನೂನು ಇದೆಯೇ? ಅಥವಾ ಏನಾದರೂ ಕಾನೂನು ಮಾಡುವುದಕ್ಕೆ ಸಾಧ್ಯ ಇದೆಯೇ?

† ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ನಮ್ಮ ನಿಯಮಾಳಿ ಪ್ರಕಾರ ಈ ಚಿತ್ರಗಳು ಸೆನ್ಸಾರ್ ಆದ ಕೂಡಲೇ ಆ ಚಿತ್ರ ಸಬ್ಸಿಡಿಗೆ ಅರ್ಹವಾಗಿರುತ್ತದೆ. ಆದರೆ ಆ ಚಿತ್ರಗಳು ಪ್ರದರ್ಶನಕ್ಕೆ ಬರಬೇಕಾದರೆ ನಾನಾ ರೀತಿಯ ತೊಂದರೆಗಳು ಇರುತ್ತವೆ, ಅವರಿಗೆ ತಕ್ಷಣ ಥಿಯೇಟರ್ ಸಿಕ್ಕುವುದು ಬಹಳ ಕಷ್ಟ, ಅದನ್ನು ರಿಲೀಸ್ ಮಾಡುವುದಕ್ಕೆ ನಾನಾ ತೊಂದರೆಗಳು ಇವೆ. ಅವರು ಸಬ್ಸಿಡಿ ತೆಗೆದು ಕೊಂಡು ಪ್ರದರ್ಶನ ಮಾಡದೇಹೋದರೆ ಈಗ ಇರತಕ್ಕಂಥಾ ಕಾನೂನಿನಲ್ಲೇ ಅವರ ಮೇಲೆ ಕಾರ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ಅವಕಾಶವೂ ಇಲ್ಲ.

ಶ್ರೀ ಎಂ. ಶ್ರೀನಿವಾಸ್.— ಈರೀತಿ ಚಿತ್ರಕ್ಕೆ ಸಬ್ಸಿಡಿ ತೆಗೆದುಕೊಂಡು ಮುಂದೆ ಮಿಸ್ ಅಪ್ರೊಪ್ರಿಯೇಷನ್ ಆಗುವ ಪ್ರಸಂಗ ಇದೆ. ಆದುದರಿಂದ ಇದಕ್ಕೆ ಸಬ್ಸಿಡಿ ಕೊಡಬೇಕಾದರೆ ಚಿತ್ರ ಪ್ರದರ್ಶನ ಆದಮೇಲೆ ಏನಾದರೂ ಕೊಡುವುದಕ್ಕೆ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಒಂದು ನಿಯಮಾವಳಿ ಮೊದಲು ಇತ್ತು. ಆನಂತರ ಈ ಒಂದು ನಿಯಮಾಳಿಯನ್ನು ಬದಲಾವಣೆ ಮಾಡಿದೆ. ಈಗ ಮತ್ತೆ ಅದನ್ನು ವಾಪಸ್ಸು ತೆಗೆದುಕೊಂಡು ಹಳೆಯ ನಿಯಮಾವಳಿ ಬಗ್ಗೆ ನೀ ಹೋಗಬೇಕು ಅನ್ನುವ ಒಂದು ಸಲಹೆ ಇದೆ. ಅವಾಗ ತಾವು ಹೇಳಿದ್ದನ್ನು ಪರಿಶೀಲನೆ ಮಾಡುತ್ತೇನೆ. ಈಗ ಇದನ್ನೇ ಸರಿ ಮಾಡುವುದಕ್ಕೆ ಹೋದರೆ ಅದರಿಂದ ಒಳ್ಳೆಯ ಪರಿಣಾಮವಾಗುವ ಬದಲು ಕಟ್ಟ ಪರಿಣಾಮವಾಗುತ್ತದೆ.

ಶ್ರೀ ಎಂ. ಶ್ರೀನಿವಾಸ್.—ಈ ಚಿತ್ರಗಳಿಗೆ ಸಬ್ಸಿಡಿ ಕೂಡತಕ್ಕಂಥಾ ಒಂದು ಉದ್ದೇಶ ಇದಕ್ಕೆ ಉತ್ತೇಜನ ಕೊಡಬೇಕು ಅನ್ನುವ ಉದ್ದೇಶದಿಂದ ಕೊಡುತ್ತಾ ಇದ್ದೇವೆ ಆದರೆ ಇದನ್ನು ಮುಂದೆ ದುರುಪಯೆ ಆಗಪಡಿಸತಕ್ಕಂಥಾ ವ್ಯವಸ್ಥೆ ಇದೆ. ಆದುದರಿಂದ ಇದಕ್ಕೆ ಒಂದು ಕಮಿಟಿಯನ್ನಾದರೂ ಮಾಡಿ ಏನಾದರೂ ಮಾಡಿ, ಇದರ ಬಗ್ಗೆ ತಾವು ತನಿಖೆ ಮಾಡಿಸಿದರೆ ಇನ್ನೂ ಬೇಕಾದಷ್ಟು ವಿಚಾರಗಳು ಗೊತ್ತಾಗುತ್ತದೆ. ಇದು ಸಾರ್ವಜನಿಕ ಹಣವಾದ್ದರಿಂದ ಇದನ್ನು ಮಿಸ್ ಅಪ್ರೊಪ್ರಿಯೇಟ್ ಮಾಡಿ ಕೊಳ್ಳುವುದಕ್ಕೆ ಅವಕಾಶ ಕೊಡಬಾರದು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಆದುದರಿಂದ ಈ ಬಗ್ಗೆ ಒಂದು ಬಿಗಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ ಮತ್ತು ಈ ಚಿತ್ರಗಳನ್ನು ಪ್ರದರ್ಶನ ಆದಮೇಲೆ ಸಬ್ಸಿಡಿ ಕೊಡುವುದಕ್ಕೆ ಏನಾದರೂ ಸಾಧ್ಯವಾಗುತ್ತದೆಯೇ ಅನ್ನುವುದರ ಬಗ್ಗೆಯೂ ತಮ್ಮಿಂದ ನಾನು ಉತ್ತರ ತಿಳಿಯಬಯಸುತ್ತೇನೆ.

ಒಂದು ಚಿತ್ರಕ್ಕೆ ಸಬ್ಸಿಡಿ ತೆಗೆದುಕೊಂಡು ಆದನ್ನು ಪ್ರದರ್ಶಿಸದೆ, ಅದೇ ಸಬ್ಸಿಡಿಯಲ್ಲಿ ಇನ್ನೊಂದು ಚಿತ್ರವನ್ನು ತೆಗೆಯಲಾಗುತ್ತಿದೆ ಎಂದು ತಿಳಿದುಬಂದಿದೆ. ಆದುದರಿಂದ. ಈ ರೀತಿ ಸಬ್ಸಿಡಿ ಹಣ ದುರುಪಯೋಗವಾಗದಂತೆ ತಡೆಗಟ್ಟುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಎಚ್. ಶ್ರೀನಿವಾಸ್.—ಚಿತ್ರ ಬಿಡುಗಡೆಯಾಗಿಲ್ಲವೆನ್ನುವ ಕಾರಣದಿಂದ ಅದಕ್ಕೆ ಕೊಟ್ಟ ಸಬ್ಸಿಡಿ ಹಣ ದುರುಪಯೋಗವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ, ಚಿತ್ರ ಬಿಡುಗಡೆ ಯಾಗುವುದಕ್ಕೆ ಮುನ್ನ ಪಡೆದುಕೊಂಡು ಸಬ್ಸಿಡಿ ಹಣವನ್ನು ಬೇರೊಂದು ಚಿತ್ರದ ನಿರ್ಮಾಣಕ್ಕೆ ಉಪಯೋಗಿಸಿದರೆ, ಆದು ಸಬ್ಸಿಡಿ ಹಣದ ದುರುಪಯೋಗಕ್ಕೆ ಎಡೆಮಾಡಿ ಕೊಡಬಹುದು. ಇದಲ್ಲದೆ, ಸಬ್ಸಿಡಿ ಹಣದಲ್ಲಿ ಬೇರೆ ರೀತಿಯ ದುರುಪಯೋಗಗಳ ಬಗ್ಗೆ ಮಾನ್ಯ ಸದಸ್ಯರು ಸ್ಪಷ್ಟ ಪಡಿಸಿಲ್ಲ. ಅವರು ಆ ಬಗ್ಗೆ ನನಗೆ ಬರೆದು ತಿಳಿಸಿದರೆ, ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.